







# ಮಣ್ಣಿಂದಲೆ... ಮಣ್ಣಿಂದಲೇ..!

**ಮಣ್ಣಿನ ಆಭರಣ ಮನಮೋಹಕವಾಗಿದ್ದು ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ. ಉಡುಪಿಗೆ ಮ್ಯಾಚಿಂಗ್ ಮಾಡಿಕೊಳ್ಳಲು ಸೂಕ್ತವೆನಿಸುವ ಟೆರಾಕೋಟ ಆಭರಣ, ಫ್ಯಾಷನ್‌ಪ್ರಿಯ ಮಹಿಳೆಯರ ಮನತಣಿಸುತ್ತಿದೆ.**

■ ಶೋಭಾ ದೇಸಾಯಿ

ಆಭರಣ ಮಣ್ಣಲ್ಲೇ ಮಾಡಿರಲಿ, ಚಿನ್ನದಲ್ಲೇ ಮಾಡಿರಲಿ, ಧರಿಸಿದಾಗ ಅಂದವಾಗಿ ಕಾಣಬೇಕು, ಹಾಕಿಕೊಳ್ಳಲು ಆರಾಮದಾಯಕವಾಗಿರಬೇಕು, ಉಡುಗೆಗೆ ಒಪ್ಪುವಂತಿರಬೇಕು, ಫ್ಯಾಷನಬಲ್ ಆಗಿಯೂ ಇರಬೇಕು ಎಂಬುದು ಎಲ್ಲ ಹೆಂಗಳೆಯರ ಬಯಕೆ.

ಶೃಂಗಾರಕ್ಕೆ ಜೊತೆ ನೀಡಲೆಂದೇ ರಚಿತವಾಗಿವೆಯೇನೋ ಅನ್ನುವಂತಹ ಆಕರ್ಷಣೆಯುಳ್ಳ ಈ ಆಭರಣಗಳು ಚಿನ್ನ, ಬೆಳ್ಳಿ, ಮುತ್ತು, ಹವಳಕ್ಕೆ ಸಡ್ಡು ಹೊಡೆಯುವಷ್ಟು ನೈಜತೆಯ ಕುಸುರಿ ಕಲೆಯೊಂದಿಗೆ ಮಿನುಗುತ್ತಿವೆ. ಇವು ಕೈಯಲ್ಲಿ ಅರಳಿದ ಮಣ್ಣಿನ ಆಭರಣಗಳೇ? ಎಂದು ಬೆರಗುಗೊಳಿಸುವಷ್ಟು ಸಹಜವಾಗಿವೆ.

ರಾಜಸ್ಥಾನ ಹಾಗೂ ಪಶ್ಚಿಮ ಬಂಗಾಳದಲ್ಲಿ ಜನಪ್ರಿಯವಾಗಿರುವ ಟೆರಾಕೋಟ ಹೆಸರಿನ ಈ ಆಭರಣಗಳು ಇಂದು ದೇಶದ ನಾನಾ ಭಾಗಗಳಲ್ಲಿ